# ಜೆಎಸ್‌ಎಸ್ ಮಹಾವಿದ್ಯಾಪೀಠ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಸ್ವಾಯತ್ತ)

ಊಟಿ ರಸ್ತೆ, ಮೈಸೂರು 570 025

ಪರಮಪೂಜ್ಯ ಜಗದ್ಗುರು 'ರಾಜಗುರುತಿಲಕ'



## ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ

ಮತ್ತು

## ಜೆಎಸ್‌ಎಸ್ ರೇಡಿಯೋ 91.2 FM

### ಸಮುದಾಯ ಬಾನುಲಿ ಕೇಂದ್ರದ ಉದ್ಘಾಟನೆ

**29 ಆಗಸ್ಟ್ 2021 * ಭಾನುವಾರ * ಬೆಳಗ್ಗೆ 11.00**

### ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

### ಜೆಎಸ್‌ಎಸ್ ರೇಡಿಯೋ ಉದ್ಘಾಟನೆ

**ಡಾ. ಎಲ್. ಮುರುಗನ್**

ಮೀನುಗಾರಿಕೆ, ಪಶುಸಂಗೋಪನೆ, ಡೈರಿ
ವಾರ್ತಾ ಮತ್ತು ಪ್ರಸಾರ ಕೇಂದ್ರ ರಾಜ್ಯ ಸಚಿವರು

### ಜಯಂತಿ ಉದ್ಘಾಟನೆ

**ಶ್ರೀ ವಿ. ಸೋಮಣ್ಣ**

ವಸತಿ ಮತ್ತು ಮೂಲಸೌಕರ್ಯ
ಅಭಿವೃದ್ಧಿ ಸಚಿವರು

### ಅಧ್ಯಕ್ಷತೆ

**ಶ್ರೀ ಎಸ್.ಎ. ರಾಮದಾಸ್**

ಶಾಸಕರು ಹಾಗೂ ಮಾಜಿ ಸಚಿವರು

### 'ಲೋಗೋ' ಮತ್ತು 'ಆ್ಯಪ್' ಬಿಡುಗಡೆ

**ಶ್ರೀ ಪ್ರತಾಪ್ ಸಿಂಹ**

ಲೋಕಸಭಾ ಸದಸ್ಯರು

### ಮುಖ್ಯ ಅತಿಥಿಗಳು

**ಶ್ರೀ ತನ್ವೀರ್ ಸೇಠ್**

ಶಾಸಕರು ಹಾಗೂ ಮಾಜಿ ಸಚಿವರು

**ಶ್ರೀ ಎಲ್. ನಾಗೇಂದ್ರ**

ಶಾಸಕರು

**ಶ್ರೀಮತಿ ಸುನಂದ ಪಾಲನೇತ್ರ**

ಮಹಾಪೌರರು, ಮೈಸೂರು ಮಹಾನಗರ ಪಾಲಿಕೆ

**ಪ್ರೊ. ಜಿ. ಹೇಮಂತ ಕುಮಾರ್**

ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ

### ತಮಗೆಲ್ಲ ಹಾರ್ದಿಕ ಸ್ವಾಗತ

ಭಾಗವಹಿಸುವವರ ಸಂಖ್ಯೆಯನ್ನು ಮಿತಗೊಳಿಸಿದೆ
ಭಾಗವಹಿಸುವವರು ಕೋವಿಡ್-19ರ ಮಾರ್ಗಸೂಚಿಗಳನ್ನು ಪಾಲಿಸಬೇಕು
ಆನ್‌ಲೈನ್ ಮೂಲಕ ಕಾರ್ಯಕ್ರಮ ವೀಕ್ಷಿಸಲು ಕೋರಿದೆ

LIVE STREAMING

YouTube http://Youtube.com/c/JSSMahavidyapeethaonline

https://www.facebook.com/JSSMVP http://jssonline.org

ಪ್ರಸಾದ : ಮಧ್ಯಾಹ್ನ 1.00

**ಜೆಎಸ್‌ಎಸ್ ಮಹಾವಿದ್ಯಾಪೀಠ :** ಸಹಸ್ರ ವರ್ಷಗಳಿಗೂ ಮಿಗಿಲಾದ ಉಜ್ವಲ ಇತಿಹಾಸವನ್ನು ಹೊಂದಿರುವ ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ಸಮಾಜದ ಅಭ್ಯುದಯಕ್ಕಾಗಿ ತನ್ನನ್ನು ಸಮರ್ಪಿಸಿಕೊಂಡಿದೆ. 23ನೆಯ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅನುಪಮ ದೂರದರ್ಶಿತ್ವದ ಫಲವಾಗಿ 1954 ರಲ್ಲಿ ಸ್ಥಾಪನೆಯಾದ ಜೆಎಸ್‌ಎಸ್ ಮಹಾವಿದ್ಯಾಪೀಠವು ಇಂದಿನ ಪರಮಪೂಜ್ಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಅಪೂರ್ವವಾದ ಕ್ರಿಯಾಶಕ್ತಿ ಹಾಗೂ ಮಾರ್ಗದರ್ಶನಗಳ ಫಲವಾಗಿ ದೇಶ–ವಿದೇಶಗಳಲ್ಲಿ 300ಕ್ಕೂ ಹೆಚ್ಚಿನ ಸಂಸ್ಥೆಗಳನ್ನು ಹೊಂದಿದೆ. ಇವುಗಳಲ್ಲಿ ಮೈಸೂರಿನ ಜೆಎಸ್‌ಎಸ್ ಕಾಲೇಜಿನಲ್ಲಿ ಪ್ರಾರಂಭವಾಗುತ್ತಿರುವ ಸಮುದಾಯ ರೇಡಿಯೋ ಕೇಂದ್ರವೂ ಒಂದಾಗಿದೆ.

**ಜೆಎಸ್‌ಎಸ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು :** 1964 ರಲ್ಲಿ ಪ್ರಾರಂಭವಾಯಿತು. ಕಾಲೇಜಿನಲ್ಲಿ ಕಲೆ, ವಿಜ್ಞಾನ, ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣ ವಿಭಾಗಗಳಿವೆ. ಸ್ನಾತಕ ಪದವಿಗಳ ಜೊತೆಗೆ ಹದಿನೈದು ಸ್ನಾತಕೋತ್ತರ ಪದವಿ ಕೇಂದ್ರಗಳಿವೆ. ಕಾಲೇಜು ಮೊದಲು ರಾಮಾನುಜ ರಸ್ತೆಯಲ್ಲಿ ಪ್ರಾರಂಭವಾಗಿತ್ತು. ಜೆಎಸ್‌ಎಸ್ ಆಸ್ಪತ್ರೆಗೆ ಸ್ಥಳಾವಕಾಶಕ್ಕಾಗಿ ಕಾಲೇಜನ್ನು ಊಟಿ ರಸ್ತೆಯ ಈಗಿರುವ ಆವರಣಕ್ಕೆ 1993 ರಲ್ಲಿ ಸ್ಥಳಾಂತರಿಸಲಾಯಿತು. ಕಾಲೇಜಿನಲ್ಲಿ ಸುಮಾರು 3400 ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅತ್ಯುತ್ತಮ ಪ್ರಯೋಗಾಲಯಗಳು, ಗ್ರಂಥಾಲಯ, ಆಟದ ಮೈದಾನ, ವಿದ್ಯಾರ್ಥಿನಿಯರ ವಸತಿ ನಿಲಯ, ಇತ್ಯಾದಿ ವಿಶೇಷ ಸೌಲಭ್ಯಗಳಿವೆ. ನುರಿತ ಬೋಧಕ ಬೋಧಕೇತರ ಸಿಬ್ಬಂದಿ ಸೇವೆ ಸಲ್ಲಿಸುತ್ತಿದ್ದಾರೆ.

**ಜೆಎಸ್‌ಎಸ್ ರೇಡಿಯೋ 91.2 FM ಕೇಂದ್ರ :** ಸಮುದಾಯದ ಅವಶ್ಯಕತೆ ಹಾಗೂ ಸಮೀಕ್ಷೆಯ ಫಲಿತಾಂಶದ ಆಧಾರದ ಮೇರೆಗೆ ಮೈಸೂರು ನಗರ ಮತ್ತು ಗ್ರಾಮೀಣ ಪ್ರದೇಶದ ಜನರಿಗೆ ಅಭಿವೃದ್ಧಿ ವಿಚಾರಗಳ ಕುರಿತು ಮಾಹಿತಿಯನ್ನು ಒದಗಿಸಿ, ಜಾಗೃತಿ ಮೂಡಿಸಿ ಸಶಕ್ತ ಹಾಗೂ ಜಾಗೃತ ಸಮುದಾಯವನ್ನು ರೂಪಿಸುವ ಗುರಿಯೊಂದಿಗೆ ರೇಡಿಯೋ ಕಾರ್ಯಕ್ರಮಗಳನ್ನು ರೂಪಿಸಿ ಪ್ರಸಾರ ಮಾಡಲಾಗುತ್ತದೆ.

**ಉದ್ದೇಶಗಳು :** ಸ್ಥಳೀಯ ಜನರಿಗೆ ಅಗತ್ಯವಿರುವ ಮಾಹಿತಿಯನ್ನು ನಿರಂತರವಾಗಿ ಸಕಾಲದಲ್ಲಿ ಪೂರೈಸುವುದು, ಸ್ಥಳೀಯ ವೈಶಿಷ್ಟ್ಯ, ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವುದು, ಧ್ವನಿ ಇಲ್ಲದವರಿಗೆ ಧ್ವನಿಯಾಗುವುದು, ಸ್ಥಳೀಯ ಸಮಸ್ಯೆಗಳನ್ನು ಗುರುತಿಸಿ ಪರಿಹಾರೋಪಾಯವನ್ನು ಸೂಚಿಸುವುದು, ಶಿಕ್ಷಣ, ಆರೋಗ್ಯ, ದುರ್ಬಲರ ಸಬಲೀಕರಣ ವಿಚಾರಗಳನ್ನೊಳಗೊಂಡಂತೆ ಸಮುದಾಯದ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಿ ನಿರಂತರವಾಗಿ ಪ್ರಸಾರ ಮಾಡುವುದು.

**ಶ್ರೋತೃಗಳು ಮತ್ತು ಸಮುದಾಯದ ಭಾಗವಹಿಸುವಿಕೆ :** ಕೇಂದ್ರದ ವೈಶಿಷ್ಟ್ಯವೆಂದರೆ ಸಮುದಾಯದ ಭಾಗವಹಿಸುವಿಕೆಯೊಂದಿಗೆ ಸಮುದಾಯವನ್ನು ಮುನ್ನಡೆಸುವುದು. ವಿದ್ಯಾರ್ಥಿಗಳು, ಯುವಕ–ಯುವತಿಯರು, ಹಿರಿಯ ನಾಗರಿಕರು, ಕೂಲಿ ಕಾರ್ಮಿಕರು, ವಿವಿಧ ಕ್ಷೇತ್ರದ ತಜ್ಞರು, ಕೃಷಿಕರು ಹಾಗೂ ಜನಸಾಮಾನ್ಯರನ್ನೊಳಗೊಂಡಂತೆ ಮೈಸೂರು ನಗರದ ಸುಮಾರು 10 ಲಕ್ಷ ಜನರು ಈ ರೇಡಿಯೋ ಕೇಂದ್ರದ ಪ್ರಸಾರದ ವ್ಯಾಪ್ತಿಗೆ ಬರುತ್ತಾರೆ. ಸಾಮಾಜಿಕ–ಆರ್ಥಿಕ ಸಬಲೀಕರಣಗಳನ್ನೊಳಗೊಂಡ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರತಿಯೊಬ್ಬರೂ ಭಾಗವಹಿಸಲು ಅವಕಾಶವಿದೆ.

**ಪ್ರಸಾರದ ಕಾರ್ಯಕ್ರಮಗಳು :** ಕರುಣಾಳು ಬಾ ಬೆಳಕೆ, ಜೀವ ಸಂಜೀವಿನಿ, ಪ್ರತಿಭಾ ವಿಲಾಸ, ಕಾವ್ಯ ಪರಂಪರೆ, ಕೃಷಿ, ಇದು ನಮ್ಮ ನಾಡು, ಭಾವ ಸಂಗಮ, ಇವರು ನಮ್ಮವರು, ಪರಿಸರ ಪರಿಚಯ, ಆಯುರ್‌ಸತ್ವ, ಜ್ಞಾನಸುಧಾ, ವಿಜ್ಞಾನ–ಜಾಣಸುದ್ದಿ, ಶಿಕ್ಷಣ, ಕಾನೂನು ಅರಿವು, ಇವೇ ಮುಂತಾದ ಸರಣಿ ಕಾರ್ಯಕ್ರಮಗಳು ಬಿತ್ತರಗೊಳ್ಳಲಿವೆ.

**ಜೆಎಸ್‌ಎಸ್ ರೇಡಿಯೋ 91.2 FM ಆಲಿಸುವುದು :** ರೇಡಿಯೋ ಸೆಟ್ ಅಥವಾ ಮೊಬೈಲ್ ಫೋನ್‌ನಲ್ಲಿ 91.2 FM ಅನ್ನು ಟ್ಯೂನ್ ಮಾಡುವ ಮೂಲಕ, ಆ್ಯಂಡ್ರಾಯ್ಡ್ ಫೋನಿನಲ್ಲಿನ ಗೂಗಲ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ ಜೆಎಸ್‌ಎಸ್ ರೇಡಿಯೋ ಆ್ಯಪ್ ಮೂಲಕ ಹಾಗೂ www.jsscacs.edu.in ವೆಬ್‌ಸೈಟಿನಲ್ಲಿ ಕೇಳಬಹುದು.

**ಪ್ರಾರಂಭದಲ್ಲಿ ಪ್ರಸಾರದ ಸಮಯ : ಪ್ರತಿದಿನ ಬೆಳಗ್ಗೆ 7.00 ರಿಂದ 8.00, ಸಂಜೆ 4.00 ರಿಂದ 5.00**

**ಜಾಹೀರಾತುಗಳಿಗೆ ಅವಕಾಶ :** ವಾಣಿಜ್ಯ ಉತ್ಪನ್ನ ಮತ್ತು ಸೇವೆಗಳ ಪ್ರಚಾರಕ್ಕಾಗಿ ಜಾಹೀರಾತು ನೀಡಲು ಅವಕಾಶವಿದೆ (ಷರತ್ತುಗಳು ಅನ್ವಯ). ಅದು ಜಾಹೀರಾತು ಮತ್ತು ಶ್ರವ್ಯ–ದೃಶ್ಯ ಪ್ರಚಾರ ನಿರ್ದೇಶನಾಲಯದ (ಡಿ.ಎ.ವಿ.ಪಿ) ನಿಯಮಕ್ಕೆ ಅನುಗುಣವಾಗಿರುತ್ತದೆ.

---

ದೂರವಾಣಿ: 0821-2546563, 8296725912
Email: jssradio91.2@gmail.com, Web: www.jsscacs.edu.in